ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಸದರಿ ಗ್ರಾಮಕ್ಕೆ ಪ್ರೌಢಶಾಲೆಯ ಅವಶ್ಯಕತೆ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**ವಿಜಾಪುರ ಕ್ಷೇತ್ರದ ಹೊನ್ನುಟಗಿ ಗ್ರಾಮಕ್ಕೆ ಪದವಿ ಪೂರ್ವ ಕಾಲೇಜು ಸ್ಥಾಪನೆ.**

1551 - ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬಿಜಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹೊನ್ನುಟಗಿ ಗ್ರಾಮಕ್ಕೆ ಪದವಿ ಪೂರ್ವ ಕಾಲೇಜು ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ ಪ್ರಸ್ತುತ ವರ್ಷದಿಂದಲೇ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಬಿಜಾಪುರ ತಾಲ್ಲೂಕಿನಲ್ಲಿ ಈಗಾಗಲೇ 23 ಪದವಿ ಪೂರ್ವ ಕಾಲೇಜುಗಳು ಇದ್ದು ಅವುಗಳಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಇಲ್ಲದೆ ಇರುವುದರಿಂದ ಹೊನ್ನುಟಗಿ ಗ್ರಾಮಕ್ಕೆ ಇನ್ನೊಂದು ಪದವಿ ಪೂರ್ವ ಕಾಲೇಜಿನ ಅವಶ್ಯಕತೆ ಕಂಡು ಬರುವುದಿಲ್ಲ.

ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಜವಾಹರ್ ನವೋದಯ ವಿದ್ಯಾಲಯಗಳ ಪ್ರಾರಂಭ.**

1555 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಜವಾಹರ ನವೋದಯ ವಿದ್ಯಾಲಯಗಳನ್ನು ಎಲ್ಲಿ ಯಾವಾಗ ಪ್ರಾರಂಭಿಸಲಾಗಿದೆ? (ಸ್ಥಳಗಳ ವಿವರ)*

*ಆ) ಜಿಲ್ಲಾ ಪುನರ್ವಿಂಗಡನೆಯಾದ ಮೇಲೆ ಹೊಸದಾಗಿ ಯಾವ ಯಾವ ಜಿಲ್ಲೆಗಳಿಗೆ ನವೋದಯ ವಿದ್ಯಾಲಯಗಳನ್ನು ಪ್ರಾರಂಭಿಸಲಾಗಿದೆ? (ಸ್ಥಳಗಳ ವಿವರ)*

*ಇ) ಹಾಗಿದ್ದಲ್ಲಿ, ಬಾಗಲಕೋಟೆ ಜಿಲ್ಲೆ ಐತಿಹಾಸಿಕ ಪ್ರಸಿದ್ಧ ಬಾದಾಮಿಗೆ ಮಂಜೂರಾತಿ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?*

*ಈ) ಯಾವಾಗ ಮಂಜೂರಾತಿ ನೀಡಿ ನವೋದಯ ವಿದ್ಯಾಲಯ ಪ್ರಾರಂಭಿಸಲಾಗುವುದು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 20 ಜಿಲ್ಲೆಗಳಲ್ಲಿ ನವೋದಯ ವಿದ್ಯಾಲಯಗಳಿವೆ. ಈ ಕೆಳಕಂಡ ಸ್ಥಳಗಳಲ್ಲಿ ನವೋದಯ ಶಾಲೆಗಳಿವೆ. ಈ ಶಾಲೆಗಳು 1986-87ರಿಂದ ವಿವಿಧ ವರ್ಷಗಳಲ್ಲಿ ಪ್ರಾರಂಭವಾಗಿ ನಡೆಯುತ್ತಿವೆ.

| ಕ್ರ.ಸಂ. | ಸ್ಥಳ | ತಾಲ್ಲೂಕು | ಜಿಲ್ಲೆ |
|---|---|---|---|
| 1. | ತಿಪ್ಪಾಂತ:ನಾರಾಯಣಪುರ | ಬಸವಕಲ್ಯಾಣ | ಬೀದರ್ |
| 2. | ಭೀಮರಾಯನಗುಡಿ | ಶಹಾಪುರ | ಗುಲ್ಬರ್ಗ |
| 3. | ಕೂಕನೂರು | ಯಲ್ಬುರ್ಗಾ | ರಾಯಚೂರು |
| 4. | ಚಿಕ್ಕಜೋಗಿಹಳ್ಳಿ | ಕೂಡ್ಲಿಗಿ | ಬಳ್ಳಾರಿ |
| 5. | ಕೋಧಳಿ-ಕುಪ್ಪನವಾಡಿ | ಚಿಂಚೋಳಿ | ಬೆಳಗಾಂ |
| 6. | ಆಲಮಟ್ಟಿ ಡ್ಯಾಂ ಸೈಟು | | ಬಿಜಾಪುರ |
| 7. | ಕುಮಟಾ | | ಉತ್ತರಕನ್ನಡ |
| 8. | ಕ್ಯಾರೆಕೊಪ್ಪರೋಡ್ | | ಧಾರವಾಡ |
| 9. | ಬಾಳೆಹೊನ್ನೂರು | | ಚಿಕ್ಕಮಗಳೂರು |
| 10. | ಗಾಳೀಬೀಡು | ಮಡಿಕೇರಿ | ಕೊಡಗು |
| 11. | ಶಿವಾರಗುಡ್ಡ | | ಮಂಡ್ಯ ಜಿಲ್ಲೆ |
| 12. | ಹೊಂದರಬಾಳ | | ಮೈಸೂರು |
| 13. | ಹೆಬ್ರಿ | ಕಾರ್ಕಳ | ದಕ್ಷಿಣ ಕನ್ನಡ |
| 14. | ಮಾವಿನಕೆರೆ | | ಹಾಸನ |
| 15. | ಗೊಲ್ಲಹಳ್ಳಿ, ಉರ್ಡಗೆರೆ | | ತುಮಕೂರು |
| 16. | ಎಣೆಗದೆಲೆ | | ಕೋಲಾರ |
| 17. | ಗಾಜನೂರು | | ಶಿವಮೊಗ್ಗ |
| 18. | ಉಡುವಳ್ಳಿ | ಹಿರಿಯೂರು | ಚಿತ್ರದುರ್ಗ |
| 19. | ವಿದ್ಯಾನಗರ | | ಬೆಂಗಳೂರು ನಗರ |
| 20. | ದೊಡ್ಡಬಳ್ಳಾಪುರು | | ಬೆಂಗಳೂರು (ಗ್ರಾಮಾಂತರ) |

ಅ) ಜಿಲ್ಲಾ ಪುನರ್ವಿಂಗಡನೆಯಾದ ಮೇಲೆ ಗದಗ್ ಜಿಲ್ಲೆಯ ಮುಂಡರಗಿ ಹಾಗೂ ರಾಯಚೂರು ಜಿಲ್ಲೆಯ ಲಿಂಗಸಗೂರಿನಲ್ಲಿ ಜವಹರ್ ನವೋದಯ ವಿದ್ಯಾಲಯ ಸ್ಥಾಪಿಸಲು ಕೇಂದ್ರ ಸರ್ಕಾರ ಮಂಜೂರಾತಿ ನೀಡಿದ್ದು 1998-99ನೇ ಸಾಲಿನಿಂದ ಇವುಗಳನ್ನು ಪ್ರಾರಂಭಿಸಲಾಗುತ್ತಿದೆ. ಉಳಿದ ಜಿಲ್ಲೆಗಳಲ್ಲಿ ನವೋದಯ ಶಾಲೆಗಳನ್ನು ಪ್ರಾರಂಭಿಸಲು ಜಿಲ್ಲಾಧಿಕಾರಿಗಳಿಗೆ30 ಎಕರೆ ಜಮೀನು ಒದಗಿಸಲು ಪತ್ರ ಬರೆಯಲಾಗಿದೆ.

1) ಮೈಸೂರು 2) ದಾವಣಗೆರೆ 3) ಬಿಜಾಪುರ 4) ದಕ್ಷಿಣ ಕನ್ನಡ ಜಿಲ್ಲೆ 5) ಹಾವೇರಿ

ಇ) ಈಗಾಗಲೇ ಆಲಮಟ್ಟಿ ಡ್ಯಾಂ ಪ್ರದೇಶದಲ್ಲಿರುವ ನವೋದಯ ವಿದ್ಯಾಲಯವು ಬಾಗಲಕೋಟೆ ಜಿಲ್ಲೆಯಲ್ಲಿಯೇ ಇರುವುದರಿಂದ ಬಾದಾಮಿಯಲ್ಲಿ ಮತ್ತೊಂದು ನವೋದಯ ಶಾಲೆಯನ್ನು ಪ್ರಾರಂಭಿಸಲು.ಅವಕಾಶ ಇರುವುದಿಲ್ಲ. (ಬಾದಾಮಿ ತಾಲ್ಲೂಕು, ಬಾಗಲಕೋಟೆಯ ವ್ಯಾಪ್ತಿಯಲ್ಲಿದೆ)

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ರಾಜ್ಯದಲ್ಲಿರುವ ಸರ್ಕಾರಿ ಮುದ್ರಣಾಲಯಗಳ ಕುರಿತು.**

1556 - ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ) : ಮಾನ್ಯ ವಯಸ್ಕರ ಶಿಕ್ಷಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿರುವ ಸರ್ಕಾರಿ ಮುದ್ರಣಾಲಯಗಳ ಸಂಖ್ಯೆ ಎಷ್ಟು? ಹಾಗೂ ಈ ಮುದ್ರಣಾಲಯಗಳನ್ನು ಯಾವ ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು?*

*ಆ) ಪ್ರತಿಯೊಂದು ಮುದ್ರಣಾಲಯದಲ್ಲಿ ಕೆಲಸ ಮಾಡುತ್ತಿರುವ ಖಾಯಂ, ದಿನಗೂಲಿ ಮತ್ತು ಕಾಂಟ್ರಾಕ್ಟ್ ನೌಕರರ ಸಂಖ್ಯೆ ಎಷ್ಟು?*

*ಇ) ಧಾರವಾಡ ಮುದ್ರಣಾಲಯದಲ್ಲಿ ಪ್ರಮುಖ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

*ಈ) ಧಾರವಾಡ ಮುದ್ರಣಾಲಯದಲ್ಲಿನ ಕೆಲವು ಪ್ರಮುಖ ಹುದ್ದೆಗಳಲ್ಲಿ ದಿನಗೂಲಿ ಮತ್ತು ಕಾಂಟ್ರಾಕ್ಟ್ ಆಧಾರದ ಮೇಲೆ ನೇಮಕಮಾಡಿ ನಂತರ ಖಾಯಂ ಮಾಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ?*

*ಉ) ಹಾಗದ್ದಲ್ಲಿ ಅದಕ್ಕೆ ಕಾರಣಗಳೇನು?*

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು) :

ಅ) 6, (ಅನುಬಂಧ -1ರಲ್ಲಿ ವಿವರ ನೀಡಲಾಗಿದೆ)

ಆ) ಅನುಬಂಧ -2ರಲ್ಲಿ ವಿವರ ನೀಡಲಾಗಿದೆ.